ಪರಿಶೀಲನೆ ಮಾಡಲಾಗಿದೆಯೇ (ಸಂಪೂರ್ಣ ವಿವರಗಳನ್ನು ದಾಖಲಾತಿಗಳೊಂದಿಗೆ ನೀಡುವುದು)?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ಹೌದು.

(ಆ) ಹೊಸಪೇಟೆ ನಗರದ ಪಶ್ಚಿಮದಲ್ಲಿ (ಈ ಹಿಂದೆ ಉತ್ತರ ಎಂದು ಕರೆಯ ಲಾಗುತ್ತಿದ್ದ) 110 ಕೆ. ವಿ. ವಿದ್ಯುತ್ ಉಪ ಕೇಂದ್ರ ಮಂಜೂರಾಗಿರುತ್ತದೆ. ಸದರಿ ವಿದ್ಯುತ್ ಉಪಕೇಂದ್ರಕ್ಕೆ ಅಗತ್ಯವಿರುವ ಭೂಮಿಯನ್ನು ಗುರುತಿಸಲಾಗಿದ್ದು, ಭೂಮಿಯು ತುಂಗಭದ್ರ ಮಂಡಳಿಗೆ ಸೇರಿರುತ್ತದೆ. ಸದರಿ ಭೂಮಿಯನ್ನು ಕ.ವಿ.ಪ್ರ.ನಿ.ನಿ. ಗೆ ಲೀಸ್ ಆಧಾರದ ಮೇಲೆ ಒದಗಿಸಲು ಕೋರಲಾಗಿ, ತುಂಗಭದ್ರ ಮಂಡಳಿಯಿಂದ ಅನುಮೋ ದಿಸಲ್ಪಟ್ಟಿರುತ್ತದೆ. ತುಂಗಭದ್ರ ಮಂಡಳಿಯು ಲೀಸ್ ಮೊತ್ತವನ್ನು ತಿಳಿಸಿದ ನಂತರ, ಒಡಂಬಡಿಕೆ ಮಾಡಿಕೊಂಡು, ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಂಡ ನಂತರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಹೊಸಪೇಟೆ ತಾಲ್ಲೂಕಿನ ಬೈಲುವದ್ದಿಗೆರೆ ಗ್ರಾಮದಲ್ಲಿ 110 ಕೆ. ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಮುಂದೆ ಇದ್ದು, ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.

ಕಬ್ಬು ಬೆಳೆಗಾರರಿಗೆ ಬಾಕಿ ವೇತನ

871 (1339); ಶ್ರೀ ಆನಂದಸಿಂಗ್

(ಅ) ರೈತರು ಬೆಳೆದ ಕಬ್ಬನ್ನು ಕಾರ್ಖಾನೆಗೆ ಪೂರೈಸಿದ ಮೇಲೆ ಒಂದು ಟನ್ ಕಬ್ಬಿಗೆ ಸರ್ಕಾರ ನಿಗದಿಪಡಿಸಿರುವ ವೈಜ್ಞಾನಿಕ ಬೆಲೆ ಎಷ್ಟು;

(ಆ) ಹೊಸಪೇಟೆಯಲ್ಲಿರುವ ಐಎಸ್ಆರ್ ಸಕ್ಕರೆ ಕಾರ್ಖಾನೆಯವರು ರೈತರು ಬೆಳೆದಂತಹ ಕಬ್ಬನ್ನು ಪಡೆದು ಸದರಿ ರೈತರಿಗೆ ಹಣವನ್ನು ನೀಡ ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ರೈತರಿಗೆ ಬರೆಬೇಕಾದ ಬಾಕಿಯನ್ನು ಕೊಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಯಾವಾಗ ಕೊಡಿಸಲಾಗುವುದು?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು)

(ಅ) ಕಬ್ಬು ನಿಯಂತ್ರಣ ಮಂಡಳಿಯು ರಾಜ್ಯದ ಉತ್ತರ ಮತ್ತು ದಕ್ಷಿಣ ಭಾಗದ ಕಾರ್ಖಾನೆಗಳ ಸಕ್ಕರೆ ಇಳುವರಿ ಪ್ರಮಾಣವನ್ನು ಆಧರಿಸಿ ಹಾಗೂ 2013–14ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ನೀಡಲಾಗಿರುವ ಸವಲತ್ತುಗಳಾದ ಕಬ್ಬು ಖರೀದಿ ತೆರಿಗೆ ಮನ್ನಾ, ಹಾಗೂ ಸಕ್ಕರೆ ಮಾರಾಟದ ಮೇಲಿನ ಮೌಲ್ಯವರ್ಧಿತ ತೆರಿಗೆಗಳ ವಿನಾಯಿತಿಯನ್ನು ಗಮನದಲ್ಲಿಟ್ಟುಕೊಂಡು 2013–14ನೇ ಸಾಲಿಗೆ ಸಂಬಂಧಿಸಿದಂತೆ ಕಬ್ಬಿನ ದರವನ್ನು ಈ ಕೆಳಕಂಡಂತೆ ನಿಗದಿಪಡಿಸಿರುತ್ತದೆ.

ದಕ್ಷಿಣ ಕರ್ನಾಟಕ ಭಾಗಕ್ಕೆ ಎಕ್ಸ್ಗೇಟ್ ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ₹ 2500/–

ಉತ್ತರ ಕರ್ನಾಟಕ ಭಾಗಕ್ಕೆ ಎಕ್ಸ್ಫೀಲ್ಡ್ ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ₹2500/–

(ಆ) ಸರ್ಕಾರದ ಗಮನಕ್ಕೆ ಬಂದಿದೆ.

(ಇ) ಕಬ್ಬು ನಿಯಂತ್ರಣ ಮಂಡಳಿಯು ನಿಗದಿಪಡಿಸಿರುವ ದರದಂತೆ ಐ.ಎಸ್. ಆರ್ ಸಕ್ಕರೆ ಕಾರ್ಖಾನೆಯು ಎಕ್ಸ್ಗೇಟ್ ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ `2500/– ರಂತೆ ಪಾವತಿಸಬೇಕಾಗಿರುತ್ತದೆ.

ಕಬ್ಬು ನಿಯಂತ್ರಣ ಮಂಡಳಿ ನಿರ್ಣಯದಂತೆ ಅಧಿಸೂಚಿಸಲಾಗಿರುವ ಕಬ್ಬಿನ ದರದಂತೆ ಕಾರ್ಖಾನೆಯು 2013–14ನೇ ಸಾಲಿನಲ್ಲಿ ನುರಿಸಿರುವ ಕಬ್ಬಿಗೆ ಈ ಕೆಳಗಿನಂತೆ ಕಬ್ಬಿನ ದರ ಪಾವರಿಸಬೇಕಾಗಿರುತ್ತದೆ.

ನುರಿಸಿದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ)	₹ 2500/– ರಂತೆ ಪಾವತಿಸಬೇಕಾದ ಮೊತ್ತ	ಪಾವತಿಸಿರುವ ಮೊತ್ತ	ಬಾಕಿ ಮೊತ್ತ
236127	5903	4844	1059

ಕಬ್ಬು ನಿಯಂತ್ರಣ ಮಂಡಳಿಯು 2013–14ನೇ ಸಾಲಿಗೆ ನಿಗದಿಪಡಿಸಿರುವ ಕಬ್ಬಿನ ದರ ₹2500/– ರ ಆದೇಶವನ್ನು ಪ್ರಶ್ನಿಸಿ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ, ಎನ್. ಎಸ್. ಎಲ್. ಶುಗರ್ಸ್, ಲಿ., ಮತ್ತು ಕೋರಮಂಡಲ್ ಶುಗರ್ಸ್ ಹಾಗೂ ಇತರೆ ಕಾರ್ಖಾನೆಗಳು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 54865–67/2013ನ್ನು ದಾಖಲಿಸಿದ್ದು, ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿ ಇರುತ್ತದೆ. ಈ ಮಧ್ಯೆ ಕಬ್ಬಿನ ದರ ಪಾವತಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ನೋಟೀಸ್ ನೀಡಿದ್ದು, ಕಾರ್ಖಾನೆಗಳು ಇದನ್ನು ಗೌರವಾನ್ವಿತ ಉಚ್ಚ ನ್ಯಾಯಲಯದಲ್ಲಿ ಪ್ರಶ್ನಿಸಿರುತ್ತವೆ. ನ್ಯಾಯಲಯವು ಈ ಸಂಬಂಧ ದಿನಾಂಕ: 22.05.2014 ರಂದು ನೀಡಿರುವ ಮಧ್ಯಂತರ ತಡೆಯಾಜ್ಞೆ ಆದೇಶ ನೀಡಿರುತ್ತದೆ. ಈ ಮಧ್ಯಂತರ ಆದೇಶದ ಪ್ರಯೋಜನವು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಹಾಗೂ ಲಾಭದಾಯಕ ಬೆಲೆ ನೀಡದಿರುವ ಕಾರ್ಖಾನೆಗಳಿಗೆ ಅನ್ವಯಿಸುವುದಿಲ್ಲವೆಂದು, ಅಂತಹ ಪ್ರಕರಣಗಳಲ್ಲಿ ಸರ್ಕಾರವು ನೋಟೀಸ್ ನೀಡಿ ಕ್ರಮ ಕೈಗೊಳ್ಳಬಹುದೆಂದು ಆದೇಶಿಸಿದೆ.

ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರ ಪಾವತಿಸದೇ ಇರುವ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ

ನಿರ್ದೇಶನಾಲಯ ದಿಂದ ದಿನಾಂಕ: 31.05.2014 ರಂದು ನೋಟೀಸ್ ನೀಡಿ, ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಹಾಗೂ 14 ದಿನಗಳ ನಂತರ ಪಾವತಿಸಲಾದ ಮೊತ್ತಕ್ಕೆ ವಿಳಂಬವಾದ ಅವಧಿಗೆ ಬಡ್ಡಿ ಸಮೇತ ನೀಡಿದ ಬಗ್ಗೆ 7 ದಿನಗಳಲ್ಲಿ ವರದಿ ನೀಡಲು ಹಾಗೂ ತಪ್ಪಿದಲ್ಲಿ, ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3 (8) ರ ಪ್ರಕಾರ ಭೂ–ಕಂದಾಯ ಬಾಕಿ ಎಂದು ಪರಿಗಣಿಸಿ ಕಬ್ಬು ಬಿಲ್ ಬಾಕಿಯನ್ನು ಶೆ.15ರ ಬಡ್ಡಿಯೊಂದಿಗೆ ವಸೂಲು ಮಾಡಿ ರೈತರಿಗೆ ಪಾವತಿಸಲು ವಸೂಲಾತಿ ಪ್ರಮಾಣ ಪತ್ರ ಹೊರಡಿಸಲಾಗುವುದೆಂದು ತಿಳಿಸಲಾಗಿದೆ. ಐ.ಎಸ್.ಆರ್. ಸಕ್ಕರೆ ಕಾರ್ಖಾನೆಯು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್.ಆರ್.ಪಿ. ದರವನ್ನು ಪಾವತಿ ಮಾಡದೇ ಇರುವುದರಿಂದ ದಿನಾಂಕ: 21–06–2014ರಂದು ಕಬ್ಬು ಬಿಲ್ಲು ಬಾಕಿಯನ್ನು ಭೂಕಂದಾಯ ಬಾಕಿ ಎಂದು ವಸೂಲು ಮಾಡಲು ವಸೂಲಾತಿ ಪ್ರಮಾಣ ಪತ್ರವನ್ನು ನೀಡಲಾಗಿದೆ.

ಈ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಆದೇಶದ ನಂತರ ಮುಂದೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬಳ್ಳಾರಿ – ಹೊಸಪೇಟೆ ರಸ್ತೆ

872 (1340); ಶ್ರೀ ಆನಂದ ಸಿಂಗ್ (ವಿಜಯನಗರ –ಬಳ್ಳಾರಿ)

(ಅ) ಬಳ್ಳಾರಿ–ಹೊಸಪೇಟೆ ರಾಷ್ಟ್ರೀಯ ಹೆದ್ದಾರಿಯು ಸಂಚಾರಕ್ಕೆ ಯೋಗ್ಯವಲ್ಲದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ದುರಸ್ಥಿ ಮಾಡಿ ಸಂಚಾರಕ್ಕೆ ಯೋಗ್ಯ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳ ಸಂಪೂರ್ಣ ಮಾಹಿತಿ ನೀಡುವುದು;